**ಸಾಕ್ಷಿಗೆ ದಿನಾಂಕ 17.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ. ಎಂ ವಿ ಹೆಚ್ ವಕೀಲರಿಂದಃ

ಸಾಕ್ಷಿಹಾಜರು ಮಾಡಿದ ಹೆಚ್ಚುವರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಪಿ 31 | ಪೊಲೀಸ್ ಇಂಟಿಮೇಷನ್ ನ ದೃಢೀಕೃತ ಪ್ರತಿ (ಮೂಲ ದಾಖಲೆಯನ್ನು ತಾಳೆ ನೋಡಿ ಹಿಂತಿರುಗಿಸಲಾಯಿತು) |
| ನಿ.ಪಿ 32 | ಕೇಸ್ ಶೀಟ್ ನ ದೃಢೀಕೃತ ಪ್ರತಿ (ಮೂಲ ದಾಖಲೆಯನ್ನು ತಾಳೆ ನೋಡಿ ಹಿಂತಿರುಗಿಸಲಾಯಿತು) |

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಆರ್ ಬಿ ವಕೀಲರಿಂದಃ**

ನಾನು ಹಾಜರುಪಡಿಸಿರುವ ದಾಖಲೆಗಳನ್ನು ಕರ್ತವ್ಯದ ಮೇಲೆ ಹಾಜರಿದ್ದ ವೈದ್ಯರು ಬರೆದಿರುತ್ತಾರೆ. ಪೊಲೀಸ್ ಇಂಟಿಮೇಷನ್ ಮೂಲ ದಾಖಲೆಯ ಪುಟ ಸಂಖ್ಯೆ 283, 284 ಮತ್ತು 286 ಇದ್ದು ಪುಟ ಸಂಖ್ಯೆ 285 ಏನಾಗಿದೆ ಎಂದರೆ ಕಣ್ಣು ತಪ್ಪಿನಿಂದ ಹರಿದು ಹೋಗಿರುತ್ತದೆ. ನಾನು ಕಳೆದ 3 ವರ್ಷಗಳಿಂದ ಕರ್ತವ್ಯದಲ್ಲಿರುತ್ತೇನೆ. ಈ ದಾಖಲೆಗಳ ಸಂರಕ್ಷಕಳು ನಾನೇ ಆಗಿರುತ್ತೇನೆ. ವೈದ್ಯಕೀಯ ನಿಯಾಮವಳಿಗಳ ಪ್ರಕಾರ ಯಾವುದೇ ದಾಖಲೆಗಳ ಪುಟಗಳು ಹರಿದು ಹೋದರೆ ಅವುಗಳನ್ನು ಅಲ್ಲಿಯೇ ಅದೇ ಸ್ಥಿತಿಯಲ್ಲಿ ಇಡಬೇಕು ಎಂದರೆ ಸರಿ. ಪೊಲೀಸ್ ಇಂಟಿಮೇಷನ್ ಮೂಲ ದಾಖಲೆಯ ಪುಟ ಸಂಖ್ಯೆ 285 ಅರ್ಜಿದಾರರಿಗೆ ಸಂಬಂಧಿಸಿದ್ದು, ಅವರಿಗೆ ಅನುಕೂಲವಾಗಲಿ ಎಂದು ಅದನ್ನು ಹರಿದು ಹಾಕಿರುತ್ತೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರು ಏಕ-ಪಕ್ಷೀಯ.**

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**